ಒಮ್ಮೊಮ್ಮೆ ಆ ಬಸ್ಸಿನಿಂದ ಇಳಿಯುತ್ತಾರೆ. ಮೊದಲು ಬಹಳ ಜನ ಬರುವುದು ಹೋಗುವುದು ಇತ್ತು. ಹೆರಿಗೆಯಾಗುವ ಹೆಂಗಸರು ಮೊದಲು ಬರುತ್ತಿದ್ದರು. ಸರ್ಕಾರಿ ಆಸ್ಪತ್ರೆ ಬಂದ ಮೇಲೆ ಇಲ್ಲಿ ಡಾಕ್ಟರರಿರುತ್ತಾರೆಂದು ಬರುತ್ತಿದ್ದರು. ಡಾಕ್ಟರರು ಬರುವುದೇ ಇಲ್ಲ, ನರ್ಸ್ ಮಾತ್ರ ಎಲ್ಲಾ ನೋಡಿಕೊಂಡು ಹಣ ಕೇಳುತ್ತಿದ್ದಳು. ಕಂಪೌಂಡರ್ ತನ್ನ ಮನೆಯಲ್ಲೇ ಪ್ರ್ಯಾಕ್ಟೀಸ್ ಮಾಡುತ್ತಿದ್ದ. ಹೆರಿಗೆಗೆಂದು ಬರುವವರ ಸಂಖ್ಯೆ ಕ್ರಮೇಣ ಕಡಿಮೆಯಾಗಿ ಅವು ದೊಡ್ಡ ಶಹರಗಳ ಸರ್ಕಾರಿ ಆಸ್ಪತ್ರೆಗಳಲ್ಲೇ ನಡೆಯತೊಡಗಿತ್ತು. ಹೀಗಾಗಿ ಹೊಸ ಹುಡುಗರು ತಮ್ಮ ಪೂರ್ವಜರ ಹಳ್ಳಿಯನ್ನೇ ನೋಡಿರಲಿಲ್ಲ.

ಅದ್ಯಾಕೊ ಎರಡು ಮೂರು ದಿನದಿಂದ ಪ್ರವಾಸಿ ಬಂಗಲೆಗೆ ನಾನಾ ನಮೂನಿಯ ಕಾರುಗಳು ಬಂದು ಹೋಗುವುದು ನಡೆದೇ ಇತ್ತು. ಸುರೇಶಣ್ಣ ಬಂದಿರಬಹುದೆಂದು ಫಕೀರ ಒಮ್ಮೆ ಅಲ್ಲಿ ಹೋಗಿ ಅಲ್ಲಿಯ ವಾಚ್‌ಮನ್‌ನನ್ನು ಕೇಳಿದ. ಅವನ ಪರಿಚಯ ಫಕೀರನಿಗೆ ಆಗಿತ್ತು. "ಅವರು ಬಂದಿಲ್ಲ ಬಿಡಪಾ. ಆದ್ರ ಏನೋ ಆಗೈತಿ. ಕೆಲವರು ಸುರೇಶಣ್ಣ ಬಂದಿಲ್ಲ. ನಾನೂ ಅವರನ್ನ ನೋಡದೆ ಬಾಳಾ ದಿನಾ ಆತು. ಮಠದ ಮಂದಿನೂ ಬಂದು ಕೇಳಿಕೊಂಡು ಹ್ವಾದ್ರು" ಎಂದ ವಾಚ್‌ಮನ್. ತನಗ್ಯಾಕ ಇಲ್ಲದ ಉಸಾಬರಿ ಎಂದು ಫಕೀರ ಅಲ್ಲಿಂದ ಹೊರಟುಬಂದ. ಎರಡು ಮೂರು ದಿನ ಕಳೆದವು. ಒಂದೆರಡು ಜೋಳದ ರೊಟ್ಟಿ ಮಾಡಿಕೊಂಡು ತಿಂದು ಫಕೀರ ಬೇರೆ ಕೆಲಸವೇ ಇಲ್ಲದ್ದರಿಂದ ಒಂದು ಹರಕಲು ಚಾಪೆ ಹಾಸಿಕೊಂಡು ಮಲಗಿದ್ದ. ಯಾರೋ ಕಂಪೌಂಡ್ ಒಳಗೆ ಬಂದಂತೆ ಶಬ್ದವಾಯಿತು. ಮಗ್ಗುಲಾಗಿ ಕಣ್ಣು ತೆರೆದು ನೋಡಿದ. ನಾಲ್ಕೈದು ಜನ ಚಿಕ್ಕವರು ದೊಡ್ಡವರು, ಒಳ್ಳೆಯ ಬಟ್ಟೆ ಹಾಕಿಕೊಂಡವರು ನಿಧಾನಕ್ಕೆ ಒಳಗೆ ಬಂದರು. ಫಕೀರ ಕಣ್ಣು ತಿಕ್ಕಿಕೊಳ್ಳುತ್ತ ಎದ್ದು ಕುಳಿತ.

"ಸುರೇಶಣ್ಣಾರ ಮನಿ ಇದ ಏನಪಾ?" ಒಬ್ಬ ಜುಬ್ಬಾಧಾರಿ ಕೇಳಿದ.

"ಹೌದ್ರಿ, ಆದ್ರ ಅವರು ಇಲ್ಲಿ ಇಲ್ರಿ. ಈ ಕಡೆ ಬರದ ಒಂದು ವರ್ಷದ ಮ್ಯಾಗೇ ಆಗ್ಯೇತ್ರಿ. ಏನಾರ ಬೇಕಾಗಿತ್ತೇನ್ರಿ?" ಫಕೀರ ಕೇಳಿದ.

"ನಿನಗ ಅವರದು ಎಷ್ಟು ವರ್ಷದಿಂದ ಗೊತ್ತೈತಿ?" ಇನ್ನೊಬ್ಬ ಕೇಳಿದ.

"ಅವರು ಸಣ್ಣವರಿದ್ದಾಗಿಂದ ಗೊತ್ತೈತಿ. ಅವರು ಇಲ್ಲೆ ಸಾಲಿಗೆ ಹೋಗೊ ಮುಂದಿಂದ ಗೊತ್ರಿ."

"ಅವರು ನಿನ್ನ ಗುರುತು ಹಿಡಿತಾರೇನು?"

"ಹಿಡಿದ ಏನ್ರಿ! ಅವರ ಕೂಟ ಆಡಿ ಉಂಡು ಬೆಳೆದೀನಿ. ನನಗ ಮತ್ತ ತಿಂಗಳಾ ಪೆನಶನ್ ಬರೋ ಹಂಗ ಅವರ ಮಾಡಿ ಕೊಟ್ಟಾರ."

"ನಿನ್ನ ಮಾತು ಕೇಳತಾರೇನು?"

"ಅದನ್ನ ಹೇಳೋದು ಕಠಿಣ ಐತ್ರಿ. ಎಷ್ಟಂದ್ರೂ ಅವ್ರು ದಣ್ಯಾರು, ನಾನು ಆಳ ಮಗಾರಿ."

ಫಕೀರನ ಈ ಮಾತು ಕೇಳಿ ಅವರೆಲ್ಲ ಸ್ವಲ್ಪ ದೂರ ಹೋಗಿ ನಿಂತು ತಮ್ಮ ತಮ್ಮೊಳಗೆ ಏನೇನೊ ಗುಸು ಗುಸು ಮಾತನಾಡಿಕೊಂಡರು. ನಂತರ ಫಕೀರನ ಬಳಿ ಬಂದು, "ಊರಿಗೆ ಕರಕೊಂಡು ಹೋಕ್ಕೆವಂದ್ರ ನೀನು ಏನೇನು ಸಾಮಾನು ಕಟಿಗೊಂಡು ಹೋಕ್ಕಿಯಪಾ?" ಎಂದು ಒಬ್ಬ ಕೇಳಿದ.

"ನಾನು ಯಾವಾಗ್ಲೂ ಬ್ಯಾರೆ ಊರಿಗೇ ಹೋಗಿಲ್ಲಲ್ರಿ" ಎಂದ ಫಕೀರ.

"ಹಂಗ್ಯಂಗಪಾ?"

"ಹೌದ್ರಿ. ದೇವರಾಣೆಗೂ ನಾ ಖರೆ ಹೇಳಾಕತ್ತೀನ್ರಿ. ಮೈ ಮ್ಯಾಗಿಂದೊಂದು ಅಂಗಿ ಧೋತರಿ, ಮತ್ತ ಇಲ್ಲೆ ರಟ್ಟಿನ ಡಬ್ಬ್ಯಾಗ ಇನ್ನೊಂದು ಟವಲು, ಅಂಗಿ, ಧೋತ್ರ ಅದಾವರಿ. ಇವನ್ನ ಒಗದ ಹಾಕಿದಾಗ ಅವನ್ನ ಹಕ್ಕೊಂತೇನ್ರಿ. ಇದನೆಲ್ಲಾ ಯಾಕ ಕೇಳಾಕತ್ತೀರಿ? ಸುರೇಶಣ್ಣಾರು ನನಗ ಇಲ್ಲಿ ಇರಬ್ಯಾಡಂತ ಏನಾರ ಹೇಳಿ ಕಳಿಸ್ಯಾರೇನ್ರಿ, ಮತ್ತ?"